# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ,ತುಮಕೂರು-572 103☎:0816 - 2255650,2273511 ಫ್ಯಾಕ್ಸ್ : 0816-2270719


ಸಂಖ್ಯೆ:ತು.ವಿ.: ಪ.ವಿ.:ವಿ.ನಿ-03:2019-20/119 ದಿನಾಂಕ: 21.05.2019

## ಅಧಿಸೂಚನೆ

**ವಿಷಯ:** 2019 ರ ಮೇ/ಜೂನ್ ಮಾಹಗಳಲ್ಲಿ ನಡೆಯಲಿರುವ ಸ್ನಾತಕ ದೈಹಿಕ ಶಿಕ್ಷಣ(ಬಿ.ಪಿ.ಇಡಿ) ಪದವಿ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್(ನವೀನ & ಪೂರಕ) ಪರೀಕ್ಷೆಗಳ ಅಂತಿಮ ವೇಳಾಪಟ್ಟಿ, ಪರೀಕ್ಷಾ ಕೇಂದ್ರ ಘೋಷಣೆ ಹಾಗೂ ಪರೀಕ್ಷಾ ಮುಖ್ಯ ಅಧೀಕ್ಷಕರ ನೇಮಕಾತಿ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 21.05.2019

*****

2018-19 ನೇ ಶೈಕ್ಷಣಿಕ ಸಾಲಿನ ಸ್ನಾತಕ ದೈಹಿಕ ಶಿಕ್ಷಣ (ಬಿ.ಪಿ.ಇಡಿ) ಪದವಿಯ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ (ನವೀನ & ಪೂರಕ) ಪರೀಕ್ಷೆಗಳು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅಂತಿಮ ವೇಳಾಪಟ್ಟಿಯಂತೆ (Annexure-01) ನಡೆಯುತ್ತವೆ. ಸದರಿ ವೇಳಾಪಟ್ಟಿಯನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

ಈ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, **ಶ್ರೀ ಸಿದ್ಧಗಂಗಾ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಸಿದ್ಧಗಂಗಾ ಮಠ, ಕ್ಯಾತ್ಸಂದ್ರ, ತುಮಕೂರು ಈ ಕಾಲೇಜನ್ನು ಪರೀಕ್ಷಾ ಕೇಂದ್ರವನ್ನಾಗಿ ಘೋಷಿಸಲಾಗಿದೆ.** ಮತ್ತು ಈ ಪರೀಕ್ಷಾ ಕೇಂದ್ರಕ್ಕೆ ಸದರಿ ಕಾಲೇಜಿನ **ಪ್ರಾಂಶುಪಾಲರನ್ನು ಪರೀಕ್ಷಾ ಮುಖ್ಯ ಅಧೀಕ್ಷಕರನ್ನಾಗಿ ನೇಮಕಾತಿ ಮಾಡಲಾಗಿದ್ದು,** ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಲಾಗಿದೆ.

ಪರೀಕ್ಷಾ ಕಾರ್ಯಗಳಲ್ಲಿ ಏನಾದರೂ ಸಮಸ್ಯೆಗಳು ಉಂಟಾದಲ್ಲಿ ಕೂಡಲೇ **ಉಪಕುಲಸಚಿವರು (ಪರೀಕ್ಷಾಂಗ)- ಮೊ.ಸಂ.-9481266917, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದು.

**ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ (Examination Chief Superintendent) ಸೂಚನೆಗಳು:**

1. ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವವರು ಪರೀಕ್ಷಾ ದಿನದಂದು ಪರೀಕ್ಷಾ ಸಮಯಕ್ಕಿಂತ **ಒಂದು ಗಂಟೆ** ಮುಂಚಿತವಾಗಿ ಕಾಲೇಜಿಗೆ ಬಂದು ಮೊಹರು ಮಾಡಿದ ಪ್ರಶ್ನೆ ಪತ್ರಿಕೆ ಲಕೋಟೆಯನ್ನು ತಮ್ಮ ಸಮ್ಮುಖದಲ್ಲೇ ತೆರೆದು ಪರೀಕ್ಷಾ ಕೊಠಡಿಗೆ ವಿತರಿಸುವ ವ್ಯವಸ್ಥೆ ಮಾಡಬೇಕು. ಮುಖ್ಯ ಅಧೀಕ್ಷಕರು ಇಲ್ಲದೆ ಇದ್ದಾಗ ಅನಧಿಕೃತವಾಗಿ ಬೇರೆ ಯಾರು ಕೂಡ ಪ್ರಶ್ನೆ ಪತ್ರಿಕೆಗಳ ಲಕೋಟೆಯನ್ನು ತೆರೆಯಬಾರದು.
2. ಯಾವುದೇ ಕಾರಣಕ್ಕೂ ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಮತ್ತು ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವುದು ತಮ್ಮ ಹೊಣೆಗಾರಿಕೆಯಾಗಿರುತ್ತದೆ.
3. Question Paper Codeಗೆ ಅನುಸಾರವಾಗಿ ಉತ್ತರ ಪತ್ರಿಕೆ ಪುಸ್ತಕಗಳನ್ನು Room Superintendent's Invigilation Dairyಯೊಂದಿಗೆ ಪ್ಯಾಕ್ ಮಾಡುವುದು ಹಾಗೂ ಆ ಪ್ಯಾಕ್‌ನ ಮೇಲೆ ದಿನಾಂಕ, ವಿಷಯ, ಕಾಲೇಜಿನ ಕೋಡ್, ಕಾಲೇಜಿನ ಹೆಸರು ಮತ್ತು ವಿಳಾಸ, Question Paper Codeನ್ನು ಹಾಗೂ ಬಂಡಲ್‌ನಲ್ಲಿರುವ ಒಟ್ಟು ಉತ್ತರ ಪತ್ರಿಕೆಗಳ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.
4. ಪ್ರಶ್ನೆ ಪತ್ರಿಕೆಗಳು ಯಾವ ಕಾರಣಕ್ಕೂ ಪರೀಕ್ಷೆಯ ಸಮಯಕ್ಕಿಂತ ಮುಂಚೆ ಬಹಿರಂಗಗೊಳ್ಳದಂತೆ ಮುಖ್ಯ ಅಧೀಕ್ಷಕರು ಸುರಕ್ಷಿತವಾಗಿ ಸಂರಕ್ಷಿಸುವುದು, ಗೌಪ್ಯತೆ ಕಾಪಾಡುವುದಕ್ಕೆ ಮೊದಲ ಆದ್ಯತೆ ನೀಡಲು ತಿಳಿಸಿದೆ.

**ಪ್ರಶ್ನೆ ಪತ್ರಿಕೆಗಳನ್ನು ಸ್ವೀಕರಿಸುವ ಬಗ್ಗೆ ಸೂಚನೆಗಳು:**

ತಮ್ಮ ಪರೀಕ್ಷಾ ಕೇಂದ್ರಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ನಡೆಯುವ ದಿನಗಳಂದು **ಬೆಳಗ್ಗೆ** 9:30 **ಗಂಟೆಗೆ** ಪರೀಕ್ಷಾ ಮುಖ್ಯ ಅಧೀಕ್ಷಕರು ಅಥವಾ ಅವರಿಂದ ಅಧಿಕೃತವಾಗಿ ನಿಯೋಜಿಸಲ್ಪಟ್ಟವರು, **ಕುಲಸಚಿವರು (ಪರೀಕ್ಷಾಂಗ), ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರಿಂದ ಪಡೆದುಕೊಳ್ಳುವುದು.

**(2 ನೇ ಪುಟಕ್ಕೆ)**

<u>ಉತ್ತರ ಪತ್ರಿಕೆಗಳನ್ನು ರವಾನಿಸುವ ಬಗ್ಗೆ ಸೂಚನೆಗಳು:</u>

ತಮ್ಮ ಪರೀಕ್ಷಾ ಕೇಂದ್ರದಲ್ಲಿ ನಡೆದ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಅದೇ ದಿನ ಕಾಲೇಜಿನವರೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು. ಸುರಕ್ಷಿತವಾಗಿ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸಂಜೆ 5:30 ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಲುಪಿಸುವ ಜವಾಬ್ದಾರಿ ಪರೀಕ್ಷಾ ಮುಖ್ಯ ಅಧೀಕ್ಷಕರದ್ದಾಗಿರುತ್ತದೆ.

ಮೇಲ್ಕಂಡ ಎಲ್ಲಾ ವಿಷಯಗಳು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಪರೀಕ್ಷೆಗಳು ಸುಗಮವಾಗಿ ನಡೆಯಲು ಕ್ರಮಕೈಗೊಳ್ಳುವುದು.

ಆದೇಶದ ಮೇರೆಗೆ,

ಉಪಕುಲಸಚಿವ (ಪರೀಕ್ಷಾಂಗ)

ಗೆ,

ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಸಿದ್ಧಗಂಗಾ ಮಠ, ತುಮಕೂರು.

<u>ಪ್ರತಿಗಳು:</u>

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಕಛೇರಿ ಪ್ರತಿ.

Annexure-01

# TUMKUR UNIVERSITY

Pareeksha Bhavan, B.H. Road, Tumakuru – 572103, Phone: 0816- 2255650, 2273511 Fax: 0816-2270719

No.TU: EXAM: Time Table: B.P.Ed:2019-20/119 Date: 21.05.2019

The Final Time Table of II Semester B.P.Ed. Theory Examinations
May/June-2019

| DATE & DAY | TIME | SUBJECTS |
|---|---|---|
| 29.05.2019 Wednesday | 10.00 am to 01.00 pm | Yoga Education |
| 31.05.2019 Friday | 10.00 am to 01.00 pm | Educational Technology and Methods of Teaching in Physical Education |
| 03.06.2019 Monday | 10.00 am to 01.00 pm | Organization, Administration and Sports Management |
| 06.06.2019 Thursday | 10.00 am to 01.00 pm | Sports Nutrition and Weight Management |

The Final Time Table of IV Semester B.P.Ed. Theory Examinations
May/June-2019

| DATE & DAY | TIME | SUBJECTS |
|---|---|---|
| 29.05.2019 Wednesday | 2.00 pm to 5.00 pm | Measurement and Evaluation in Physical Education |
| 31.05.2019 Friday | 2.00 pm to 5.00 pm | Kinesiology and Biomechanics |
| 03.06.2019 Monday | 2.00 pm to 5.00 pm | Research and Statistics in Physical Education |
| 06.06.2019 Thursday | 2.00 pm to 5.00 pm | Theory of Sports and Games & their officiating & Coaching |

Deputy Registrar (Evaluation)

# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಎಚ್.ರಸ್ತೆ, ತುಮಕೂರು-572 103, ☎ : 0816-2255650, 2273511 ಫ್ಯಾಕ್ಸ್ : 0816- 2270719


## ಸೂಚನಾ ಫಲಕಕ್ಕೆ ಕಡ್ಡಾಯವಾಗಿ

1. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯಲ್ಲಿ ಯಾವುದೇ ರೀತಿಯ ಹೆಸರು, ಗುರುತು, ಚಿಹ್ನೆ ಅಥವಾ ಸಂಕೇತಗಳನ್ನು ಬರೆಯಬಾರದು. ಬರೆದಿರುವುದು ಕಂಡುಬಂದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಅಕ್ರಮ ಚಟುವಟಿಕೆಯೆಂದು ಪರಿಗಣಿಸಿ ಅದನ್ನು ಮೌಲ್ಯಮಾಪನ ಕಾರ್ಯದಿಂದ ಹೊರಗಿಡಲಾಗುವುದು.

2. ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಮೊಬೈಲ್‌ಗಳನ್ನು ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

3. ವಿದ್ಯಾರ್ಥಿಗಳು ಪರೀಕ್ಷಾ ಅವಧಿ ಮುಗಿಯುವವರೆಗೆ ಪ್ರಶ್ನೆ ಪತ್ರಿಕೆಗಳನ್ನು ಕೊಠಡಿಯಿಂದ ಹೊರಗಡೆ ತೆಗೆದುಕೊಂಡು ಹೋಗುವಂತಿಲ್ಲ.

ಆದೇಶದ ಮೇರೆಗೆ

ಉಪಕುಲಸಚಿವ (ಪರೀಕ್ಷಾಂಗ)